ಅವಳು ಮಂಚದಲ್ಲಿ ಮಲಗಿರುವುದನ್ನು ಕಾಣುವುದಕ್ಕಾಯಿತು... ನನ್ನ ಹೃದಯ ಬಡಿಯಿತು... ಮುಚ್ಚಲು ಶ್ರಮಿಸುತ್ತಿದ್ದ ಕಣ್ಣುಗಳು ಪ್ರಕಾಶಗೊಂಡವು... ನರಗಳಲ್ಲಿ ಒಂದು ಸೆಳೆತ...

ಶಬ್ದವಾಗದಂತೆ ಬಾಗಿಲು ಮುಚ್ಚಿದೆ. ಕೋಣೆಯಲ್ಲಿ ನನಗೆ ಅಗತ್ಯವಾದ ಹೆಪ್ಪುಗಟ್ಟಿದ ಕತ್ತಲು...

ಉರಿದು ಪ್ರಜ್ವಲಿಸುತ್ತಿರುವ ಭಾವಾವೇಶದಿಂದ ಮಂಚವನ್ನು ಸಮೀಪಿಸಿದೆ.

ಅವಳ ದೇಹವನ್ನು ಸ್ಪರ್ಶಿಸಿದ ಮಾತ್ರಕ್ಕೆ ಅವಳು ಅಲುಗಾಡಿದಳು. ಕಾದು ಮಲಗಿ ಅವಳು ನಿದ್ದೆ ಹೋದುದಾಗಿರಬೇಕು. ಪಾಪ. ಅವಳ ಬಾಯಿಯನ್ನು ಕೈಯಿಂದ ಮುಚ್ಚಿ ಪಿಸುಗುಟ್ಟಿದೆ.

'ಮಾತಾಡಬೇಡ? ನಾನು...'

ಅವಳು ತಕ್ಷಣ ಎದ್ದೇಳಲು ಪ್ರಯತ್ನಿಸಿದಳು. ನನ್ನ ಅಗತ್ಯವನ್ನನುಸರಿಸಿ ರಾತ್ರಿ ನನ್ನ ಮಂಚಕ್ಕೆ ಬಂದು ಕಾದು ಮಲಗಿ ಅವಳು ತಿರಸ್ಕರಿಸುವುದೇ? ನನಗೆ ಸಿಟ್ಟು ಬಂತು. ಅದೇ ಹಾಸಿಗೆಯಲ್ಲಿ ಕೆಲವೇ ದಿನಗಳ ಹಿಂದೆ ನನ್ನ ಅಭಿಲಾಷೆಗಳಿಗೆ ಮಣಿದ ಹೆಣ್ಣಲ್ಲವೇ ಅವಳು. ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾಳೆ... ಪಕ್ಕದ ಕೋಣೆಯಲ್ಲಿ ನಿದ್ರಿಸುವ ಶಾಂತಳಿಗೆ ಇದೆಲ್ಲ ಕೇಳಿಸಬಹುದೇ? ಎಂಬುದೇ ನನಗಿದ್ದ ಭಯ... ಅವಳ ಬಾಯಿಯನ್ನು ಒತ್ತಿ ಹಿಡಿದೆ.

ಅನಿಯಂತ್ರಿತವಾದ ಭಾವಾವೇಶದಿಂದ ಮದೋನ್ಮತ್ತದ ಪರಾಕಾಷ್ಠದಲ್ಲಿ ಅದು ಸಂಭವಿಸಿತು. ಅವಳ ಕೊರಳಲ್ಲಿ ಧರಿಸಿರುವ ಏನೋ ಒಂದು ನನ್ನ ಕೈಗೆ ಸ್ಪರ್ಶಿಸಿತು. ತಕ್ಷಣ ನನಗೇನೋ, ನೆನಪಾಯಿತು. ಲಕ್ಷ್ಮಿಯ ಕೊರಳಲ್ಲಿ ಆಭರಣಗಳಿಲ್ಲ.

ಒಮ್ಮೆಗೆ ಬೆಚ್ಚಿದೆ!... ಒಂದು ಮರೆವು! ಮದ್ಯಲಹರಿ ಹೊದೆಸಿದ ಮುಸುಕು ಮನಸ್ಸಿನಿಂದ ಸರಿಯುತ್ತಿದೆ...

ನಡುಗುತ್ತಿರುವ ಕೈಗಳಿಂದ ಮೇಜಿನ ಮೇಲಿನ ಬೆಂಕಿಪೊಟ್ಟಣವನ್ನು ತಡವಿ ತೆಗೆದು ಮೇಜುದೀಪ ಉರಿಸಿದೆ.

ನನ್ನ ಕಣ್ಣುಗಳಲ್ಲಿ ಖಡ್ಗವೊಂದನ್ನು ಚುಚ್ಚಿದ ಅನುಭವವುಂಟಾಯಿತು. ಹಾಸಿಗೆಯಲ್ಲಿ ಬಿಸಿಲು ತಾಗಿ ಬಾಡಿದ ಬಾಳೆದಿಂಡಿನಂತೆ ಅವಳು ಮಲಗಿದ್ದಾಳೆ. ಮುಕ್ಕಾಲು ನಗ್ನವಾಗಿ. ಲಕ್ಷ್ಮಿಯಲ್ಲ... ಲಕ್ಷ್ಮಿಯಲ್ಲ... ಶಾಂತ!

ನನ್ನ ಹೃದಯದಲ್ಲಿ ಆ ನಿಮಿಷಗಳಲ್ಲಿ ಏನೆಲ್ಲ ಭಾವನೆಗಳು ಉಂಟಾದುವೆಂದು ಹೇಳಲು ಸಾಧ್ಯವಿಲ್ಲ.

ಹಾಸಿಗೆಯಲ್ಲಿ 'ಇಂಗ್ಲಿಷ್ ರೀಡರ್' ಅಡ್ಡಾದಿಡ್ಡಿಯಾಗಿ ಬಿದ್ದಿದೆ...

ಸರಿಯುವ ನಿಮಿಷಗಳು...

ಮೇಜುದೀಪ ಮಂಕಾಗುತ್ತಿದೆ. ಅದರಲ್ಲಿ ಎಣ್ಣೆಯಿಲ್ಲವೆಂದು ತೋರುತ್ತದೆ...

ಕಣ್ಣು ಪಿಳುಕಿಸಿಕೊಂಡಿರುವ ಆ ಅರೆಪ್ರಜ್ಞಾವಸ್ಥೆಯಿಂದ ನಾನು ಎಚ್ಚೆತ್ತಾಗ ಬಿಚ್ಚಿದ ವಸ್ತ್ರಗಳನ್ನು ಮುದ್ದೆ ಮಾಡಿ ಹಿಡಿದುಕೊಂಡು ಅವಳು ಇಳಿದು ಹೋಗುತ್ತಿದ್ದಾಳೆ.

ಬೆಳಕು ಕೆಟ್ಟು ಹೋಯಿತು.

ಕತ್ತಲ ಶೂನ್ಯತೆ...

ಏನೆಲ್ಲಾ ಸಂಭವಿಸಿತು? ಹೇಗೆಲ್ಲಾ ಸಂಭವಿಸಿತು? ಯಾವುದೂ ನೆನಪಿಲ್ಲ. ಎಲ್ಲವೂ ನೆನಪಿದೆ.

ಅದಕ್ಕೆ ಬೆಂಕಿ ಹತ್ತಿದ ಚಿಂತೆಗಳೊಡನೆ ನಾನೆಷ್ಟು ಕಾಲ ನಿಂತೆನೆಂಬುದು ಗೊತ್ತಿಲ್ಲ.

ಕತ್ತಲಾವರಿಸಿದ ಶೂನ್ಯತೆಯ ನಡುವಿನಲ್ಲಿ ನಾನು ನಿಂತಿರುವುದು... ಭೀಕರವಾದ ಈ ರಾತ್ರಿ ಕೊನೆಯಾಗಬಹುದು. ಲೋಕ ಎಚ್ಚೆತ್ತುಕೊಳ್ಳಬಹುದು.

ಹಗಲ ಬೆಳಕಿನಲ್ಲಿ ಅಣ್ಣನಾದ ನಾನು ತಂಗಿಯನ್ನು ಕಾಣಬಹುದು. ಘಳಿಗೆಗಳು ಸರಿಯುತ್ತಿದ್ದಂತೆ